ಎಂದು ನೀನೆಂದಾದರೂ ಅಂತಿಯೇನೋ ಅಂತ ಕಾದು ಕುಳಿತದ್ದೇ ಬಂತು. ಪ್ರೀತಿಯಲ್ಲಿ ಫೇಲಾಗಲೂ ನೀನೂ ನನ್ನಷ್ಟೆ ಕಾರಣ ಕಣೋ. ಲವ್ ಫೇಲ್ಯೂರ್ ಆದರೂ ಲೈಫ್ ಫೇಲ್ಯೂರಾಗಬಾರದೆಂಬುದರಲ್ಲಿ ನಂಬಿಕೆಯಿಟ್ಟವಳು ನಾನು. ಜಗತ್ತಿನ ಎಲ್ಲಾ ಸುಖ ಬೇಕಿತ್ತು, ಅದನ್ನು ಪಡೆಯುವ ಸೌಂದರ್ಯ, ಬುದ್ಧಿಮತ್ತೆ ನನ್ನಲ್ಲಿತ್ತು. ಪಡೆದುಕೊಂಡರೂ ಸೋತೆನೇನೊ. ಇತ್ತೀಚೆಗೆ ನಿನ್ನ ನೆನಪಾದಾಗಲೆಲ್ಲಾ, ಹಳೆಗಾಯ ಕೆರೆದುಕೊಂಡಂತೆ ಎಂತದೋ ಸುಖ. ಇದೆಲ್ಲಾ ಬೇಕಿತ್ತಾ? ಕಷ್ಟವೋ, ಸುಖವೋ ನಿನ್ನನ್ನೇ ಕೊರಳಿಗೆ ಕಟ್ಟಿಕೊಂಡು ತೇಲಲಾಗದ, ಮುಳುಗಲಾಗದ ಆದರ್ಶ ಪ್ರೇಮಿಯಂತೆ ಬದುಕಬಹುದಿತ್ತೇನೋ. ನಿನ್ನ ಮನೆಯವರೆಲ್ಲರೂ ನನ್ನನ್ನೂ ಒಪ್ಪಿಕೊಂಡಿದ್ದರೆಂಬುದೂ ಗೊತ್ತಿತ್ತು ಕಣೋ. ಹೀಗೆಲ್ಲಾ ಗಂಡನ ಮಗ್ಗುಲಲ್ಲಿ ನಾನು ಯೋಚಿಸುವಾಗಲೇ ನೀನು ಯಾವುದೋ ಫ್ಯಾಕ್ಟರಿಯಲ್ಲಿ ಗುಮಾಸ್ತನಾಗಿದ್ದೆ. ವರ್ಷದಲ್ಲೇ ಎಂ.ಎ. ಓದಿದ, ದುಡಿಯುವ ಹುಡುಗಿಯನ್ನು ಮದುವೆಯಾದೆ ಎಂಬ ಸುವಾರ್ತೆಯನ್ನು ಗೆಳತಿ ಅಹಲ್ಯಾ ಸಿಕ್ಕಾಗ ಬಿತ್ತರಿಸಿದ್ದಳು ಕಣೋ.

ನಾನೊಮ್ಮೆ ಊರಿಗೆ ಬಂದಾಗ ಅಮ್ಮನೂ ನಿನ್ನ ಬಗ್ಗೆ ಹೇಳಿ ದುಡಿಯುವ ಹುಡುಗಿ ಸಿಕ್ಕಿದ್ದಾಳೆಂದು ಖುಷಿಪಟ್ಟಿದ್ದಳು. ಕಾರಲ್ಲಿ ಗಂಡನ ಜೊತೆ ಹೋಗುವಾಗ ಕ್ರಾಸ್‌ನಲ್ಲೊಮ್ಮೆ ನಿನ್ನನ್ನು ನೋಡಿದೆ. ಅದೇ ಹಳೆ ಜೀನ್ಸು, ಮಾಸಿದ ದೊಗಲೆ ಶರ್ಟು, ಶೇವಿಂಗ್ ಆದ ಕೆನ್ನೆಗಳ ನಡುವಿನ ತುಟಿಗಳಲ್ಲಿ ಸಿಗರೇಟ್ ಕಂಡಾಗ ನೀನೂ ಗಂಡಸಾದೆ ಎಂದು ಬಹಳ ದಿನಗಳ ನಂತರ ಹರ್ಷಗೊಂಡಿದ್ದೆ. ನನ್ನ ಗಂಡ ನನಗ್ಯಾವುದಕ್ಕೂ ಕೊರತೆ ಮಾಡಿಲ್ಲವಾದರೂ ಅಸಲಿತನ ಕಾಣದ ವ್ಯಥೆ. ಮೊನ್ನೆ ತವರಿಗೆ ಬಂದಾಗ ದೇವಸ್ಥಾನದಲ್ಲಿ ನೀನು ನಿನ್ನ ಹೆಂಡತಿಯೊಡನೆ ಅಚಾನಕ್ ಎಂಬಂತೆ ಬಯಸದೆ ಕಣ್ಣಿಗೆ ಬಿದ್ದು ನವೆ ತರಿಸಿದೆ. ಹೆಂಡತಿಯೂ ಸುಮಾರಾಗಿದ್ದಾಳೆ ಬಿಡು. ಬಿಗಿಯಾಗಿ ಚೂಡಿದಾರ್‌ನಲ್ಲಿ ಎಲ್ಲ ಭಾಗಗಳನ್ನೂ 'ಷೋ'ಗಿಟ್ಟಂತೆ ಕಂಡಳೆಂದರೆ ಅಸೂಯೆ ಅಂದುಕೊಳ್ಳದಿರು. ನಿನಗೆ ಅಂಟಿಕೊಂಡೇ ಇದ್ದಳು. ನೀನು ಕೂತಲ್ಲಿ ಕೂತಳು, ಪ್ರದಕ್ಷಿಣೆ ಹಾಕಿದರೆ ಹಾಕಿದಳು. ಮಂಗಳಾರತಿ ತಾನೂ ತೆಗೆದುಕೊಂಡಿದ್ದಲ್ಲದೆ ಮಕ್ಕಳಿಗೆ ಮಾಡುವಂತೆ ತನ್ನ ಕೈಗಳಿಂದ ನಿನ್ನ ಮೋರೆಗೂ ಪ್ರೋಕ್ಷಿಸಿದಳು. ಹೆಂಗಸರನ್ನು ಮರಳು ಮಾಡುವುದನ್ನು ಎಲ್ಲಿ ಕಲಿತೆಯೋ ಮಾರಾಯ. ಆವತ್ತೂ ನಾನೇ ಮೇಲೆ ಬಿದ್ದು ಮಾತಾಡಿಸಿದೆ ನೋಡು. ಹೇಗಿದ್ದೀಯೋ ಪುಣ್ಯಾತ್ಮ ಎಂದರೆ ಹಿಹ್ಹಿಹಿಹ್ಹಿ ಮಾಡುತ್ತಾ ನಾನು ಯಾವತ್ತೂ ಪುಣ್ಯಾತ್ಮನೇ ಅಂದೆಯಪ್ಪ. ನಿಜ ಕಣೋ. ಮದುವೆಯಾಗಿಯೂ ನಿನ್ನನ್ನು ಪೂರಾ ಮರೆಯದ ಪ್ರೇತಾತ್ಮ ಕಣೋ ಇವಳು. ಹಾಗಂತ

